**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 28/2024

ಪಿಡಬ್ಲು :1 ಸಿಡಬ್ಲು :1

| | | |
|---|---|---|
| ಸಾಕ್ಷಿಯ ಹೆಸರು | : | ಶೃತಿ ಹರಿಜನ |
| ಗಂಡನ ಹೆಸರು | : | ರಮೇಶ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ್ತವ್ಯ | : | ಕುವೆಂಪು ನಗರ, ಬೆಳಗಾವಿ |
| ದಿನಾಂಕ | : | 07-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**<u>ಮುಖ್ಯ ವಿಚಾರಣೆ</u> : <u>ವಿಶೇಷ</u> <u>ಸರ್ಕಾರಿ ಅಭಿಯೋಜಕರಿಂದ</u>**

ಚಾಸಾಃ 4 ರಮೇಶ ನನ್ನ ಗಂಡ, ಚಾಸಾಃ 5 ವೈಜಂತಿಮಾಲಾ ನನ್ನ ತಾಯಿ, ಚಾಸಾಃ 6 ಭಾವನಾ ನನ್ನ ತಂಗಿ. ಚಾಸಾಃ 7 ಅಂಜಲಿ ನನ್ನ ತಂಗಿ. ಚಾಸಾಃ 8 ವಿಜಯಲಕ್ಷ್ಮೀ ನನ್ನ ಅಕ್ಕ. ನಾನು ಪರಿಶಿಷ್ಟ ಜಾತಿಯ ಹಿಂದು ಮಾದರ ಜಾತಿಗೆ ಸೇರಿದ್ದೇನೆ. ನಮ್ಮ ತಂದೆ ಹಿಂದು ಢೋರ ಜಾತಿಗೆ ಸೇರಿದ್ದಾರೆ. 5 ಜನ ಆರೋಪಿತರು ನನಗೆ ಗೊತ್ತಿರುತ್ತಾರೆ.

2. 1ನೇ, 2ನೇ ಮತ್ತು 3ನೇ ಆರೋಪಿತರು ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿದ್ದಾರೆ. 4ನೇ ಮತ್ತು 5ನೇ ಆರೋಪಿತರು ಬೇರೆ ಏರಿಯಾದಲ್ಲಿ ವಾಸವಾಗಿದ್ದಾರೆ. ದಿನಾಂಕಃ 07-10-2023 ರಂದು ನನ್ನ ಮಗ ನಮ್ಮ ಮನೆಯ ಹತ್ತಿರ ಟೂಶನಗೆ ಹೋಗಿದ್ದನು. ಟೂಶನ ಮುಗಿಸಿಕೊಂಡು ಮನೆಗೆ ವಾಪಸ್ಸು ಬರುವಾಗ ನನ್ನ ಮಗ ಮತ್ತು 1ನೇ ಆರೋಪಿ ಮಹೇಶ್ವರಿ ರವರ ಮಗ ಆಟ ಆಡುತ್ತಾ ಜಗಳ

ಮಾಡಿಕೊಂಡಿರುತ್ತಾರೆ. ನನ್ನ ಮಗ ಅಳುತ್ತಾ ಮನೆಗೆ ಬಂದನು. ನಾನು ನನ್ನ ಗಂಡನಿಗೆ ಫೋನ್ ಮಾಡಿ ಮನೆಗೆ ಬರುವಂತೆ ಹೇಳಿದನು. ನನ್ನ ಗಂಡ ಮನೆಗೆ ಬರುವಾಗ 1ನೇ ಆರೋಪಿ ನನ್ನ ಗಂಡನೊಂದಿಗೆ ಜಗಳ ಮಾಡಿ, ನನ್ನ ಮಗ ಅವರ ಮಗನಿಗೆ ಬೈದನು ಎಂದು ಜಗಳ ಮಾಡುತ್ತಾರೆ. ನಂತರ 1ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದ್ದು ನನ್ನ ಮಗನನ್ನು ಕೊಲೆ ಮಾಡಿಸುತ್ತೇನೆ ಎಂದು ಹೆದರಿಸಿದಳು. ನಾನು, ನನ್ನ ತಾಯಿ, ನನ್ನತಂಗಿ ಸೇರಿ ನನ್ನ ಗಂಡನನ್ನು ಮನೆಗೆ ಕರೆದುಕೊಂಡು ಹೋದೆವು. ಅಷ್ಟರಲ್ಲಿ 1ನೇ ಆರೋಪಿ ಉಳಿದ ಆರೋಪಿತರನ್ನು ಕರೆಯಿಸಿದ್ದು, 4ನೇ ಆರೋಪಿ ಬಸವರಾಜ ಮತ್ತು 5ನೇ ಆರೋಪಿ ಕಮಲಪ್ಪ ನನ್ನ ಗಂಡನ ಕಪಾಳಕ್ಕೆ ಹೊಡೆದರು. ನಾನು ಬಿಡಿಸಲು ಹೋದಾಗ ಆರೋಪಿತರು ನನಗೂ ಸಹ ಹೊಡೆದಿರುತ್ತಾರೆ. ನಾವು ಕೌಂಪೌಂಡ ಒಳಗೆ ಹೋದರು ಸಹ 4ನೇ ಆರೋಪಿ ಕೌಂಪೌಂಡ ಜಿಗಿದು ಬಂದು ನನ್ನ ಗಂಡನ ಕುತ್ತಿಗೆ ಪಟ್ಟಿ ಹಿಡಿದು ನುಗಿಸಿದನು. ನನ್ನ ಗಂಡ ನಿಲ್ಲಿಸಿದ ಸ್ಕೂಟಿ ಮೇಲೆ ಬಿದ್ದನು ಮತ್ತು ಸ್ಕೂಟಿ ಪಕ್ಕದಲ್ಲಿ ಇದ್ದ ಕಾರಿನಲ್ಲಿ ಬಿದ್ದು ಎರಡೂ ವಾಹನಗಳು ಜಖಂ ಆದವು. ಅದೇ ಸಮಯದಲ್ಲಿ 1ನೇ ಆರೋಪಿ ನನ್ನ ಗಂಡನಿಗೆ ಅವಾಚ್ಯವಾಗಿ ಬೈದಳು. ಆರೋಪಿತರು ನನ್ನ ಗಂಡನ ಮೇಲೆ ಬಹಳ ಹಲ್ಲೆ ಮಾಡಿರುತ್ತಾರೆ. 2 ಮತ್ತು 3 ನೇ ಆರೋಪಿತರು ಸ್ಥಳದಲ್ಲಿ ನಿಂತ್ತಿದ್ದು, ನನ್ನ ಗಂಡನಿಗೆ ಬಹಳ ಆಗಿದೆ, ಊರು ಬಿಟ್ಟು ಬಂದಿದ್ದಾರೆ ಅವರಿಗೆ ಇನ್ನೂ ಹೊಡೆಯಬೇಕು ಎಂದು ಹೇಳುತ್ತಿದ್ದರು. ಪೋಲಿಸರಿಗೆ ನಾವು ಹೇಳುತ್ತೇವೆ ಎಂದು ಹೇಳಿದ್ದರಿಂದ 5ನೇ ಆರೋಪಿ ನನ್ನ ತಾಯಿಗೆ ಅವಾಚ್ಯವಾಗಿ ಬೈದಿರುತ್ತಾರೆ.

3. ನಂತರ ನಾವು ಪೋಲಿಸರಿಗೆ ಫೋನ್ ಮಾಡಿ ಕರೆಯಿಸಿದ್ದೇವೆ. ಅಷ್ಟರಲ್ಲಿ ಆರೋಪಿತರು ನನ್ನ ಗಂಡನಿಗೆ ಜೀವದ ಬೆದರಿಕೆ ಹಾಕಿ ಹೊರಟು ಹೋಗಿರುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ದೂರನ್ನು ನೀಡಿದ್ದೇನೆ. ದೂರನ್ನು ನಾನು ನನ್ನತಂಗಿ ವಿಜಯಲಕ್ಷ್ಮೀ ಕಡೆಯಿಂದ ಬರೆಯಿಸಿಕೊಟ್ಟಿದ್ದೇನೆ. ದೂರನ್ನು ನಿಪಿ–1 ಎಂದು, ಅದರ

ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 [ಎ] ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-2 ಎಂದು ಗುರುತಿಸಲಾಯಿತು.

4. ಘಟನೆಯಲ್ಲಿ ನನ್ನ ಗಂಡನಿಗೆ ಪೆಟ್ಟು ಆಗಿದ್ದು, ನಾವು ಪೋಲಿಸ ಠಾಣೆಗೆ ಹೋಗಿದ್ದು , ಪೋಲಿಸರು ನಮಗೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆಪಡೆದುಕೊಂಡು ಬರುವಂತೆ ಹೇಳಿದ್ದರಿಂದ ನಾವು ಬಿಮ್ಸ ಆಸ್ಪತ್ರೆಗೆ ಹೋಗಿ ಬಂದು ನಂತರ ದೂರನ್ನು ನೀಡಿದ್ದೇನೆ. ದೂರು ನೀಡಿದ ನಂತರ ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿದ್ದಾರೆ. ಪಂಚನಾಮೆ ಸಮಯದಲ್ಲಿ ಘಟನೆ ದೃಶ್ಯ ಸಿ. ಸಿ. ಟಿ. ವಿ. ಯಲ್ಲಿ ಇದ್ದು ಅದನ್ನು ಪೆನ್ ಡ್ರೈವ್ ಮತ್ತು ಸಿಡಿಯಲ್ಲಿ ಹಾಕಿ ಪೋಲೀಸರಿಗೆ ನೀಡಿದ್ದೇನೆ. ಪಂಚನಾಮೆಯನ್ನು ನಿಪಿ-3 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 [ಎ] ಎಂದು ಗುರುತಿಸಲಾಯಿತು.

5. ಘಟನೆ ಬಗ್ಗೆ ನಾನು ಡಿ.ಸಿ.ಪಿ. ರವರಿಗೆ ಮತ್ತು ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿದ್ದೇನೆ. ನಂಬರ 3526/2023 ದಿನಾಂಕಃ 09-11-2023 ರಂದು ಪ್ರಧಾನ ಸಿವಿಲ್ ಮತ್ತು ಜೇ ಎಮ್ ಎಫ್ ಸಿ. ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ ಸೀಲು ಮಾಡಲಾದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ.164 ರಡಿಯಲ್ಲಿ ನೀಡಿದ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ . ಅದನ್ನು ಕಡತದಲ್ಲಿ ಇರಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಬಿ.ಡಿ.ಕೆ ವಕೀಲರಿಂದ ಃ**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.